1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ

ನ್ಯಾಯಾಲಯ ಚನ್ನಗಿರಿ .

ಸಿಸಿ ನಂ. **2487/2025**

ಹೆಸರುಃ ಕಾವ್ಯ ಚಾಸಾಃ 1

ಗಂಡಃ ಪ್ರದೀಪ್ ಕುಮಾರ್ ಪ್ರಾಸಾಃ 1

ವಯಸ್ಸುಃ 26 ವರ್ಷ

ಉದ್ಯೋಗಃ ಗೃಹಿಣಿ

ವಾಸ ಸ್ಥಳಃ ಶಿವಮೊಗ್ಗ

ಸಾಕ್ಷಿಗೆ ದಿನಾಂಕಃ 02-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ -4 ನನ್ನ ಅಕ್ಕ, ಚಾಸಾ-5 ನನ್ನಮಾವ , ಚಾಸಾ-6 ಮತ್ತು 7 ನನ್ನ ತಂದೆ , ತಾಯಿ, 1ನೇ ಆರೋಪಿ ನನ್ನ ಗಂಡ.

ನನಗೆ ಆರೋಪಿ ಯಾವುದೇ ದೈಹಿಕ ಮತ್ತು ಮಾನಸಿಕವಾಗಿ ಹಿಂಸೆ ನೀಡಿಲ್ಲ, ನನ್ನ ಮೇಲೆ ಹಲ್ಲೆ ಮಾಡಿಲ್ಲ, ನನಗೆ ಅವಚ್ಯ ಶಬ್ದಗಳಿಂದ ಬೈಯ್ದಿಲ್ಲ.

ನನ್ನ ಹಾಗೂ ಆರೋಪಿಯ ನಡುವೆ ಬಾಯಿ ಮಾತಿನ ಜಗಳವಿದ್ದು ಸಾಂಸಾರಿಕ ವಿಚಾರವಾಗಿ ಅದನ್ನು ಬಗೆಹರಿಸಿಕೊಳ್ಳಲು ಠಾಣೆಗೆ ಹೋದಾಗ ಪೊಲೀಸರು ಕೆಲವು ದಾಖಲೆ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ ಎಂದು ಸಹಿ ಮಾಡಿರುತ್ತೇನೆ.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ದೂರಾಗಿದ್ದು ಅದನ್ನು ನಿಪಿ- 1 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು. ಅದು ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ, ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾರು ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ. .

ಈಗ ನೋಡುತ್ತಿರುವ ಮತ್ತೊಂದು ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಸ್ಥಳ ಮತ್ತು ಅಮಾನತು ಮಹಜರಾಗಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು,

ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. 2 (ಎ) ಎಂದು ಗುರುತಿಸಲಾಯಿತು. ಅದು ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ, ಸದರಿ ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಯಾರು ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ.

ಈಗ ನೋಡುತ್ತಿರುವ ಪೊಟೋದಲ್ಲಿ ನಾನು ಇದ್ದೆನೆ. ಸದರಿ ಪೊಟೋವನ್ನು ಯಾರು ಯಾವ ಕಾರಣಕ್ಕಾಗಿ ತೆಗೆದರು ಎಂದು ನನಗೆ ಗೊತ್ತಿಲ್ಲ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸದರಿ ಪೊಟೋಗೆ ನಾನುಪೊಲಸರ ಕೋರಿಕೆ ಮೇರೆಗೆ ನಿಂತಿರುತ್ತೇನೆ.

ಈಗ ನೋಡುತ್ತಿರುವ ಮತ್ತೊಂದು 2 ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆ ಪೊಲೀಸರು ದಿಃ 02-02-2025 ಮತ್ತು 03-02-2025 ರಂದು ನನಗೆ ಕೊಟ್ಟ ನೋಟಿಸಾಗಿದ್ದು ಅವುಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. 4(ಎ) ಮತ್ತು 5(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಯಾರು ಯಾವ ಕಾರಣಕ್ಕಾಗಿ ಕೊಟ್ಟರು ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ, ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ದೂರು, ಪಂಚನಾಮೆ ಮತ್ತು ಮರು ಹೇಳಿಕೆ ಮತ್ತು ನೋಟಸುಗಳಿಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು, ದೂರು, ಪಂಚನಾಮೆ ಮತ್ತು ಮರು ಹೇಳಿಕೆ ಮತ್ತು ನೋಟಸುಗಳನ್ನು ನೋಡಲಾಗಿ ಸಾಕ್ಷಿಯು ದೂರು, ಪಂಚನಾಮೆ ಮತ್ತು ಮರು ಹೇಳಿಕೆ ಮತ್ತು ನೋಟಸುಗಳಿಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 01-02-2025 ರಂದು ಠಾಣೆಗೆ ಹಾಜರಾಗಿ ನಿಪಿ-1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 02-02-2025 ರಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ -2 ಮತ್ತು 3 ರ ಸಮಕ್ಷಮ ನಿಪಿ 2 ರಂತೆ ಪಂಚನಾಮೆಯನ್ನು ಮದ್ಯಾಹ್ನ 12.30 ಯಿಂದ 1.30ರವರೆಗೂ

ಜರುಗಿಸಿ,ಅದಕ್ಕೆ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ, ಅದರಿ ಸಮಯಕ್ಕೆ ಅದೇ ಕಾಲಕ್ಕೆ ನಿಪಿ 3 ರಂತೆ ಭಾವ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಪೊಲೀಸರು ಸದರಿ ಸಮಯಕ್ಕೆ ನನಗೆ ನಿಪಿ-4 ಮತ್ತು 5 ರಂತೆ ನೋಟಿಸನ್ನು ಜಾರಿ ಮಾಡಿ ದಾಖಲೆಗಳನ್ನು ಮತುತ ಸಾಕ್ಷಿದಾರರನ್ನು ಹಾಜರುಪಡಿಸುವಂತೆ ಕೋರಿದರು ಎಂದರೆ ಸರಿಯಲ್ಲ. ನಾನು ಠಾಣೆಗೆ ಹಾಜರಾಗಿ ಒಂದು ಲಗ್ನಪತ್ರಿಕೆ 2 ಪೊಟೋಗಳನ್ನು ದಾಖಲೆಗಳನ್ನು ಹಾಜರುಪಡಿಸಿದ ಕುರಿತು ದಿಃ 03-02-2025 ರಂದು ----------ಸದರಿ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ . ಅಲ್ಲಗೆಳೆದ ಹೇಳಿಕೆಯನ್ನು ನಿಪಿ 6 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಲಗ್ನಪತ್ರಿಕೆ ಮತ್ತು ಭಾವಚಿತ್ರಗಳು ನನಗೆ ಸಂಬಂಧಿಸಿದೆ. ಅವುಗಳನ್ನು ಕ್ರಮವಾಗಿ ನಿಪಿ-7 ರಿಂದ 9 ಎಂದು ಗುರುತಿಸಲಾಯಿತು. ಸದರಿ ಲಗ್ನಪತ್ರಿಕೆ ಮತ್ತು ಭಾವಚಿತ್ರಗಳನ್ನು ಪೊಲಿಸೇರ ಕೋರಿಕೆ ಮೇರೆಗೆ ಕೊಟ್ಟಿರುತ್ತೇನೆ.

ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ – ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ, ಚನ್ನಗಿರಿ.**